


ಗೊಡಚಿ ವೀರಭದ್ರೇಶ್ವರ ಗುಡಿ ಮುಂದ ಹಾಕಿದ್ದ ದೊಡ್ಡ ಮದುವಿ ಮಂಟಪದಾಗ ರಿಕ್ಕಂಗ ಮಂದಿ ಸೇರಿತ್ತು. ಮೊದಲ ಮಗ್ಗಲ ಊರ ಧಣೇರ ಮಗನ ಮದುವಿ ಅಂದ್ರ ಕೇಳತಿರೇನ, ಮಂದಿ ಲಾರಿ, ಟ್ಯಾಕ್ಟರ್, ಟೆಂಪೊ ಮಾಡ್ಕೊಂಡ ಗಾಡಿಯೆಲ್ಲಾ ತುಂಬಿ ತುಂಬಿಕೊಂಡ ಬಂದಿದ್ದರು. ಕೆಲ ಹಳ್ಳಿ ಮಂದಿ ಎತ್ತಿನ ಗಾಡಿ ಹೂಡಕೊಂಡು ಲಗ್ನಕ್ಕ ಬಂದಿದ್ದರು, ಅಕ್ಕಿಕಾಳ ಇನಾ ಭಾರಾಕ್ಕ ಬೀಳೋದಿತ್ತು. ಬಂದ ಮಂದಿಗಿ ಅಡಗಿಮನ್ಯಾಗ ಉಪ್ಪಿಟ್ಟು ಚಾ ಚೂಡಾ ಭರ್ಜರಿ ತಯಾರಿ ಮಾಡಿದ್ದರು, ಹೀಂಗಾಗಿ, ಮಂದಿ ಗಾಡಿ ಇಳ್ಯಾನ ಮೊದಲ ಈರಭದ್ರ ದೇವರ ದರಸನಾ ಮಾಡಿ, ನ್ಯಾರಿ ಬಡದು ಮಂಟಪಕ್ಕ ಬಂದ್ರು. ಒಂದ ನಮೂನಿ ಜಾತ್ರಿ ಸೇರಿದಂಗ ಜನ ಸೇರಿತ್ತು. ಬರುವಾಗ ಸಣ್ಣಮಕ್ಕಳನ್ನೂ ಲಗ್ನಕ್ಕ ಕರಕೊಂಡ ಬಂದಿದ್ರು, ಮಕ್ಕಳು ಅವ್ವ ಅಪ್ಪನ ಬಿಟ್ಟ ಗುಡಿ ಮುಂದಿನ ಹಳ್ಳಾ ಕೊಳ್ಳಾ, ಸಂತಿ ಬಜಾರ ಮೊದಲ ಮಾಡಿಕೊಂಡ ತಿರುಗಿ ಮತ್ತ ಮಂಟಪಾ ಸೇರತಿದ್ದು.

ಊದುವವರು ಬಾರಿಸುವವರು ರಾಮದುರ್ಗದಿಂದ ಬಂದಿದ್ದರು. ಅವರಂತೂ ಭಾಳ ಕಲಾಕಾರ ಇದ್ರು. ‘ಮೈನೆ ಪ್ಯಾರ್ ಕಿಯಾ’ ಸಿನಿಮಾದ್ದು ಒಂದೂ ಬಿಡಲಾರದ ಎಲ್ಲಾ ಹಾಡುಗಳನ್ನು ಭಾಳ